68 ಶ್ರೀ. ಹೆಚ್.ಎಸ್.ಮಹದೇವ ಪ್ರಸಾದ
ಮಾನ್ಯ ಪೌರಾಡಳಿತ ಸಚಿವರು

ಅ ಬೆಂಗಳೂರು ನಗರದ ಉಲ್ಲಾಳ ಮುಖ್ಯ ರಸ್ತೆ, ಮಲ್ಲತಹಳ್ಳಿ, ಜ್ಞಾನಜ್ಯೋತಿನಗರ ಬಡಾವಣೆ 1ನೇ ಕ್ರಾಸ್ ಬಳಿ ರಸ್ತೆಗೆ ಅಡ್ಡಲಾಗಿ ಕಾಂಪೌಂಡ್‌ನ್ನು ಅಕ್ರಮವಾಗಿ ನಿರ್ಮಿಸಿ, ಸಾರ್ವಜನಿಕರಿಗೆತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ;

ಜ್ಞಾನಜ್ಯೋತಿನಗರ ಬಡಾವಣೆ 1ನೇ ಕ್ರಾಸ್ ಬಳಿ ರಸ್ತೆಗೆ ಅಡ್ಡಲಾಗಿ ಕಾಂಪೌಡ್‌ನ್ನು ಅಕ್ರಮವಾಗಿ ನಿರ್ಮಿಸಿರುವುದಿಲ್ಲ. ಸದರಿ ಜಾಗವು ಶ್ರೀ ಎಂ.ನಟರಾಜ್‌ರವರ ಖಾಸಗಿ ಸ್ವತ್ತಾಗಿರುತ್ತದೆ.

ಆ ಹಾಗಿದ್ದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಂಪೌಡ್ ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ನಟರಾಜ್ ರವರ ನಿವೇಶನದ ದಕ್ಷಿಣ ಹಾಗೂ ಪಶ್ಚಿಮದ ಕಡೆ ಇರುವ ಬಡಾವಣೆಗೆ ಸಂಪರ್ಕ ಕಲ್ಪಿಸಲು ಕೇವಲ 10–0 ಅಡಿ ರಸ್ತೆ ಇದ್ದು. ಅದನ್ನು ಅಗಲೀಕರಣ ಮಾಡುವಂತೆ ಸಾರ್ವಜನಿಕರು ಮನವಿ ಸಲ್ಲಿಸಿದ್ದಾರೆ ಸದರಿ ಮನವಿ ಆಧಾರದ ಮೇಲೆ ರಸ್ತೆಯ ವಿಸ್ತಾರಕ್ಕಾಗಿ 286.87 ಚದರ ಅಡಿ ವಿಸ್ತೀರ್ಣದ ಜಾಗವನ್ನು ಭೂಸ್ವಾಧೀನ ಮಾಡಿಕೊಳ್ಳಲು ಪಾಲಿಕೆಯು ಕ್ರಮ ತೆಗೆದುಕೊಳ್ಳತ್ತಿದೆ.

266 ಶ್ರೀ. ವೆಂಕಟಶಿವಾರೆಡ್ಡಿ ಜಿ.ಕೆ
ಮಾನ್ಯ ಗೃಹ ಸಚಿವರು

ಅ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ ಕ್ಷೇತ್ರದ ಕಸಬಾ ಪೊಲೀಸ್ ಠಾಣೆಯನ್ನು ವಿಂಗಡಿಸಿ ಹೋಳೂರು ಅಥವಾ ಸುಗಟೂರು ಹೋಬಳಿಯಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರದ ಮುಂದಿಯೇ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ ಕ್ಷೇತ್ರಕ್ಕೆ ಕೋಲಾರ ತಾಲ್ಲೂಕಿನ ಹೋಳೂರು ಮತ್ತು ಸುಗಟೂರು ಹೋಬಳಿ ಸೇರಿರುತ್ತದೆ. ಕೋಲಾರ ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಈಗಾಗಲೇ ಸುಗುಟೂರು ಪೊಲೀಸ್ ಹೊರ ಠಾಣೆಯು ಕಾರ್ಯ ನಿರ್ವಹಿಸುತ್ತಿದ್ದು, ಸದರೊ ಸಗಟೂರು ಹೊರ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

ಆ ಕಸಬಾ ಪೊಲೀಸ್ ಠಾಣೆಗೆ 7 ಹೋಬಳಿ ಸೇರುತ್ತಿರುವುದು ಹೆಚ್ಚು ಅಪರಾದ ಕೇಸುಗಳು ಮೇಲಿಂದ ಮೇಲೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಹೌದು

ಇ ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರದ ನಿಲುವೇನು?

ಸುಗಟೂರು ಪೊಲೀಸ್ ಹೊರ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸಿದಲ್ಲಿ, ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಬಹುದಾಗಿದೆ. ಆದ್ದರಿಂದ ಸುಗಟೂರು ಹೊರಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

161 ಶ್ರೀ. ಅಮರೇಶ್

ಮಾನ್ಯ ಗೃಹ ಸಚಿವರು

ಅ. ತಾಲ್ಲಕು ಮುಟ್ಟದಲ್ಲಿ ಹೆಚ್ಚುವರಿಯಾಗಿ ಪೊಲೀಸ್ ಠಾಣೆ ಮಂಜೂರು ಮಾಡಲು ಇರುವ ಮಾನದಂಡವೇನು (ವಿವರ ನೀಡುವುದು).

ನ್ಯಾಷನಲ್ ಪೊಲೀಸ್ ಕಮಿಷನ್ (ಧರ್ಮವೀರ ಆಯೋಗ) ವರದಿಯಲ್ಲಿ ಪೊಲೀಸ್ ಠಾಣೆಯನ್ನು ಹೊಸದಾಗಿ ಸೃಜಿಸಲು ಈ ಕೆಳಕಂಡ ಮಾದಂಡಗಳನ್ನು ನಿಗದಿಪಡಿಸಿ, ಶಿಫಾರಸನ್ನು ಮಾಡಿರುತ್ತದೆ.

1. ವಿಸ್ತೀರ್ಣ–75 ಮೈಲಿ / 150 ಚ.ಕ.ಮಿಗಳ ಪ್ರದೇಶ ವ್ಯಾಪ್ತಿ.
2. ಜನಸಂಖ್ಯೆ – 50,000 ರಿಂದ 60,000
3. ಅಪರಾದ ಪ್ರಕರಣಗಳು–300 ಪ್ರಕರಣಗಳು (ವಾರ್ಷಿಕ)

ಆ ಮುಳಬಾಗಿಲು ತಾಲ್ಲೂಕಿಲ್ಲಿ ಜನಸಂಖ್ಯೆ ಹೆಚ್ಚಿದ್ದು, ಈಗಿರುವ ಒಂದು ಪೊಲೀಸ್ ಠಾಣೆಯಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಸಾಧ್ಯವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಪ್ರಸ್ತುತ ಮುಳಬಾಗಿಲು ತಾಲ್ಲೂಕಿನಲ್ಲಿ ಮುಳಬಾಗಿಲು ಮತ್ತು ನಂಗಲಿ ಪೊಲೀಸ್ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ. ಮುಳಬಾಗಿಲು ಪೊಲೀಸ್ ಠಾಣೆ ವ್ಯಾಪ್ತಿಯು 473 ಚ.ಕಿ.ಮಿ.ಗಳ ಪ್ರದೇಶ ವ್ಯಾಪ್ತಿಯನ್ನು ಹೊಂದಿದ್ದು, ಜನಸಂಖ್ಯೆ–1,60,000 ಮೀರಿರುತ್ತದೆ.

ಮುಳಬಾಗಿಲು ಪಟ್ಟಣವು ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಆಗಾಗ್ಗೆ ಮತೀಯ ಗಲಭೆಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ ಹಾಗಿದ್ದಲ್ಲಿ ಹೆಚ್ಚುವರಿಯಾಗಿ ಪೊಲೀಸ್ ಠಾಣೆ ಮಂಜೂರು ಮಾಡಲು ಸರ್ಕಾರ ಕೈಕೊಂಡಿರುವ ಕ್ರಮವೇನು?

ಈಗಿನ ಭಯೋತ್ಪಾದಿತರ ಹಾಗೂ ಇತರ ಅಪರಾಧದ ತೀವ್ರತೆಗಳನ್ನು ಪರಿಗಣಿಸಿ ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆ, ಹೊರಠಾಣೆ ಮತ್ತು ಹೊರಠಾಣೆ ಮೇಲ್ದಜೇಗೇರಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲು ಅನುಸರಿಸಬೇಕಾದ